KATK010039232023

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ತುಮಕೂರು**

**ವಿಶೇಷ ಮೊಕದ್ದಮೆ ಸಂಖ್ಯೆ.474/2023**

ಪ್ರಾ.ಸಾ. ಃ **2**

ದೋ.ಸಾ. ಃ **2**

ದಿ.**08.07.2025**

ಹೆಸರು ಃ ಮಲ್ಲಿಕಾರ್ಜುನ

ತಂದೆಯ ಹೆಸರು ಃ ವೆಂಕೋಬ

ವಯಸ್ಸು ಃ **18** ವರ್ಷ

ಉದ್ಯೋಗ ಃ **2** ನೇ ಪಿಯುಸಿ ವಿದ್ಯಾರ್ಥಿ

ವಾಸಸ್ಥಳ ಃ ಸುರಪುರ, ಯಾದಗಿರಿ ಜಿಲ್ಲೆ

ಸಾಕ್ಷಿಯನ್ನು ಕರೆಸಿ, ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ**

**1.** ನನಗೆ ಚಾ ಸಾ **10** ಮೌನೇಶ ಮತ್ತು ಚಾ ಸಾ **9** ಗದ್ದಪ್ಪ ಗೊತ್ತಿಲ್ಲ. ನಾನು **9** ನೇ ತರಗತಿಯನ್ನು ತುಮಕೂರಿನ ಮಲ್ಲಸಂದ್ರದಲ್ಲಿರುವ ಶ್ರೀ ವಿಶ್ವಭಾರತಿ ಶಾಲೆಯಲ್ಲಿ ಓದುತ್ತಿದ್ದೆನು. **2022** ನೇ ಇಸವಿಯಲ್ಲಿ ನಾನು **9** ನೇ ತರಗತಿ ಓದುತ್ತಿದ್ದೆನು. ದಿ.**21.11.2022** ರಂದು ಮಲ್ಲಮ್ಮನವರು ಎಲ್ಲರಿಗೆ ಕ್ಲಾಸ್ ತೆಗೆದುಕೊಂಡು, ಮಕ್ಕಳಿಗೆ ಊಟ ಮಾಡಿಸಿ ಮನೆಗೆ ಹೋದರು. ನಾನು ಶ್ರೀ ವಿಶ್ವಭಾರತಿ ಶಾಲೆಯ ಹಾಸ್ಟೆಲ್ ನಲ್ಲಿ ಇರುತ್ತಿದ್ದೆನು. ರಾತ್ರಿ ಊಟ ಮುಗಿಸಿ ರೂಮಿನಲ್ಲಿ ಓದುತ್ತಿದ್ದೆನು, ಅನಂತರ ಮಲಗಿದೆನು. ದಿ.**21.11.2022** ತಾರೀಖನ್ನು ಏಕೆ ಹೇಳಿದೆ ಎಂದು ನನಗೆ ಗೊತ್ತಿಲ್ಲ. ಆರೋಪಿ ಭರತ್ ಕುಮಾರ್ ವಾರಕ್ಕೆ ಎರಡು ಸಲ ಹಾಸ್ಟೆಲ್ ಗೆ ಬರುತ್ತಿದ್ದರು. ದಿ.**21.11.2022** ರಂದು ರಾತ್ರಿ **10.30** ಗಂಟೆಗೆ ಆರೋಪಿ ನಮ್ಮ ಹಾಸ್ಟೆಲ್ ಗೆ ಬಂದು ಎರಡು ಅಥವಾ ಮೂರು ರೂಮ್ ಗಳಿಗೆ ಕೈನಿಂದ ಬಾಗಿಲು ಬಡಿದುಹೋದರು. ನನ್ನ ರೂಮ್ ಬಡಿದಿಲ್ಲ. ಬೇರೆ ಮಕ್ಕಳ ರೂಮ್ ನ ಬಾಗಿಲು ಬಡಿದಿದ್ದಕ್ಕೆ ಅವರು ಚೀರಾಡಿದರು. ನಾನು ಹೊರಗೆ

ಬಂದೆನು. ಆರೋಪಿ ನಮ್ಮ ಹಾಸ್ಟೆಲ್ ನ ಬೇರೆ ಹುಡುಗರಿಗೆ ಹೊಡೆದು ಹೋಗಿದ್ದಾರೆ. ನನಗೆ ಆ ದಿನ ಆರೋಪಿ ಏನೂ ಮಾಡಲಿಲ್ಲ. ಆರೋಪಿ ನನಗೂ ಹೊಡೆದಿದ್ದಾರೆ ಎಂದು ಪೋಲೀಸರ ಮುಂದೆ ಹೇಳಿಕೆ ಕೊಟ್ಟಿಲ್ಲ.

**2.** ನಾನು ಈ ಹಿಂದೆ ತುಮಕೂರಿನ ಇನ್ನೊಂದು ನ್ಯಾಯಾಲಯಕ್ಕೆ ಹೋಗಿದ್ದೆನು.

(ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲು ಮಾನ್ಯ ಸರ್ಕಾರಿ ಅಭಿಯೋಜಕರು ಕಾಲಾವಕಾಶ ಕೋರಿರುತ್ತಾರೆ. ಆದ್ದರಿಂದ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು).

**(ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಲ್ಪಟ್ಟಿತು).**

ಓದಿ ಹೇಳಿ ಕೇ ಸರಿ ಇದೆ ಎಂದು ಒಪ್ಪಿದ್ದಾರೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು

ಸಾಕ್ಷಿಯನ್ನು ಪುನಃ ದಿ.**09.07.2025** ರಂದು ಕರೆಯಿಸಿ, ಸತ್ಯಪ್ರತಿಜ್ಞೆಯ ಪ್ರಮಾಣವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ : ಮಾನ್ಯ ಸರ್ಕಾರಿ ಅಭಿಯೋಜಕರಿಂದ :**

**3.** ನ್ಯಾಯಾಲಯದಲ್ಲಿ ಹೇಳಿಕೆ ನೀಡುವಂತೆ ಯಾರಾದರೂ ಒತ್ತಾಯ ಪಡಿಸಿದ್ದರೇ ಎಂದು ನ್ಯಾಯಾಧೀಶರು ಪ್ರಶ್ನೆ ಕೇಳಿದ್ದರು. ಇದೇ ರೀತಿ ಹೇಳಿಕೆ ನೀಡಬೇಕೆಂದು ಯಾರಾದರೂ ಒತ್ತಾಯ ಪಡಿಸಿದ್ದಾರೆಯೇ ಎಂದು ಕೇಳಿಲ್ಲ. ಬೇರೆ ಹುಡುಗರಿಗೆ ಆರೋಪಿ ಹೊಡೆದಿದ್ದಾರೆ, ನನಗೆ ಹೊಡೆದಿಲ್ಲ ಎಂದು ನ್ಯಾಯಾಧೀಶರ ಮುಂದೆ ಹೇಳಿದ್ದೇನೆ. ಈಗ ನನಗೆ ತೋರಿಸಿದ ಹೇಳಿಕೆಯಲ್ಲಿ ನನ್ನ ಸಹಿ ಇದೆ. ಆ ಹೇಳಿಕೆಯನ್ನು ನಿಶಾನೆ ಪಿ28 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ28(ಎ) ಎಂದು ಗುರುತಿಸಲಾಯಿತು. ನಾನು ಆಸ್ಪತ್ರೆಗೆ ಹೋಗಿದ್ದೇನೆ. ನಿಶಾನೆ ಪಿ18 ಫೋಟೋ ನನ್ನದು. ಆ ಫೋಟೋದಲ್ಲಿ ನನ್ನನ್ನು ಕೇಳಲು ಬಂದವರು ಇದ್ದಾರೆ. ನನಗೆ ತುಟಿಗೆ ಕೈ ಇಡಲು ಹೇಳಿದರು, ನಾನು ತುಟಿಗೆ ಕೈ ಇಟ್ಟ ಫೋಟೋ ನಿಶಾನೆ ಪಿ18 ಆಗಿದೆ.

(ಈ ಸಾಕ್ಷಿಯು ಈ ಹಿಂದೆ ತನಿಖಾಧಿಕಾರಿಯವರ ಮುಂದೆ ನೀಡಿದ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದರಿಂದ ಪ್ರತಿಕೂಲ ಪಕ್ಷಕಾರರು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅನುಮತಿ ನೀಡಬೇಕೆಂದು ವಿಶೇಷ ಸರಕಾರಿ ಅಭಿಯೋಜಕರು/ಸರಕಾರಿ ಅಭಿಯೋಜಕರು ಭಿನ್ನವಿಸಿರುತ್ತಾರೆ. ಈ ಪ್ರಕರಣದ ಕಾಗದ ಪತ್ರಗಳನ್ನು ಪರಿಶೀಲಿಸಿದಾಗ ಈ ಸಾಕ್ಷಿಯು ತನ್ನ ಹಿಂದಿನ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದು ಕಂಡುಬರುತ್ತದೆ. ಆದ್ದರಿಂದ ಪ್ರತಿಕೂಲ ಪಕ್ಷಕಾರನು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅಭಿಯೋಜನೆಗೆ ಅನುಮತಿ ನೀಡುವುದು ಸೂಕ್ತ ಮತ್ತು ನ್ಯಾಯೋಚಿತ ಎಂದು ಮನಗೊಂಡು ಅನುಮತಿ ನೀಡಲಾಯಿತು).

**ಪಾಟೀ ಸವಾಲು ಮಾನ್ಯ ಸರ್ಕಾರಿ ಅಭಿಯೋಜಕರಿಂದ :**

**4.** ಮೌನೇಶ ಮತ್ತು ಗದ್ದಪ್ಪ ನನ್ನ ಸಂಬಂಧಿಕರಲ್ಲ. ನಾನು, ಮೌನೇಶ ಮತ್ತು ಗದ್ದಪ್ಪ ಶ್ರೀ ವಿಶ್ವಭಾರತಿ ಶಾಲೆಯ ಹಾಸ್ಟೆಲ್ ನಲ್ಲಿ ಇರುತ್ತಿದ್ದೆವು ಎಂದರೆ ನಿಜ. ದಿ.**21.11.2022** ರಂದು ರಾತ್ರಿ **10.30** ಗಂಟೆಗೆ ನಾವು ಹಾಸ್ಟೆಲ್ ನಲ್ಲಿ ಮಲಗಿಕೊಂಡಿದ್ದಾಗ ಭರತ್ ಕುಮಾರ್ ಬಂದಿದ್ದರು ಎಂದರೆ ನಿಜ. ನಮ್ಮ ರೂಮಿಗೆ ಬಂದು ನಮ್ಮನ್ನು ಎಬ್ಬಿಸಿ, ಸಾಲಾಗಿ ನಿಲ್ಲಿಸಿದರು ಎಂದರೆ ನಿಜ. ಯಾಕೋ ಇಷ್ಟು ಬೇಗ ಮಲಗಿದ್ದೀರಾ, ನಾನು

ಹೇಳಿದ ಮೇಲೆ ನೀವೆಲ್ಲಾ ಮಲಗಬೇಕು ಎಂದು ಭರತ್ ಕುಮಾರ್ ಹೇಳಿದರು ಎಂದರೆ ನಿಜ. ಭರತ್ ಕುಮಾರ್ ತೆಂಗಿನ ಎಡಮಟ್ಟೆ ಮತ್ತು ಬೆಲ್ಟ್ ನಿಂದ ಹೊಡೆದಿದ್ದಾರೆ ಎಂದರೆ ನನಗೆ ಹೊಡೆದಿಲ್ಲ, ಉಳಿದ ಹುಡುಗರಿಗೆ ಹೊಡೆದಿದ್ದಾರೆ. ನನಗೂ ಹೊಡೆದಿದ್ದರಿಂದ ಆ ದಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದೇನೆ ಎಂದರೆ ಸರಿಯಲ್ಲ. ನನಗೆ ಎಡಮಟ್ಟೆ ಮತ್ತು ಬೆಲ್ಟ್ ನಿಂದ ಹೊಡೆದಿದ್ದರಿಂದ ನನ್ನ ಬಲಕೈನ ಬೆರಳಿಗೆ ಮತ್ತು ಎಡಭಾಗದ ತುಟಿಗೆ ಪೆಟ್ಟುಗಳು ಬಿದ್ದಿರುತ್ತವೆ ಎಂದರೆ ಸರಿಯಲ್ಲ. ನನ್ನ ತುಟಿಗೆ ಪೆಟ್ಟು ಬಿದ್ದಿದ್ದರಿಂದ ಬಿಇಓ ಬಂದಾಗ ನಾನು ತುಟಿಗೆ ಪೆಟ್ಟಾಗಿದ್ದನ್ನು ತೋರಿಸಿದಾಗ ನಿಶಾನೆ ಪಿ18 ರಂತೆ ಫೋಟೋ ತೆಗೆದಿದ್ದಾರೆ ಎಂದರೆ ಸರಿಯಲ್ಲ. ನನಗೂ ಪೆಟ್ಟಾಗಿತ್ತು ಎಂದು ಪೋಲೀಸರ ಮುಂದೆ ಹೇಳಿದ್ದೇನೆ ಎಂದರೆ ಸರಿಯಲ್ಲ. ನಾನು ಆ ರೀತಿ ಹೇಳಿದ್ದೇನೆ ಎಂದು ಹೇಳುವ ಹೇಳಿಕೆಯನ್ನು ನಿಶಾನೆ ಪಿ29 ಎಂದು ಗುರುತಿಸಲಾಯಿತು. ನಾನು ನ್ಯಾಯಾಧೀಶರ ಮುಂದೆ ಹೇಳಿಕೆ ಕೊಡುವಾಗ ನನಗೂ ಆರೋಪಿ ಭರತ್ ಕುಮಾರ್ ಎಡಮಟ್ಟೆ ಮತ್ತು ಬೆಲ್ಟ್ ನಿಂದ ಹೊಡೆದಿರುತ್ತಾರೆ ಎಂದು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಸುರಪುರದ ಮಕ್ಕಳು ಮತ್ತು ಸಂಬಂಧಿಕರು ಶ್ರೀ ವಿಶ್ವಭಾರತಿ ಶಾಲೆ, ಮಲ್ಲಸಂದ್ರದಲ್ಲಿ ಈಗಲೂ ಓದುತ್ತಿದ್ದಾರೆ. ನಾನು ಭರತ್ ಕುಮಾರ್ ವಿರುದ್ಧ ಹೇಳಿಕೆ ನೀಡಿದರೆ ನಮ್ಮ ಸಂಬಂಧಿಕರು ಮತ್ತು ಸುರಪುರ ಊರಿನ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತದೆ ಎಂಬ ಹೆದರಿಕೆ ಇದೆ. ಆ ಹೆದರಿಕೆಯಿಂದ ನನಗೆ ಹೊಡೆದಿಲ್ಲ, ಬೇರೆ ಮಕ್ಕಳಿಗೆ ಮಾತ್ರ ಹೊಡೆದಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ನನ್ನ ಕೈಗೆ ಮತ್ತು ತುಟಿಗೆ ಏಟಾಗಿತ್ತು ಮತ್ತು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಶ್ರೀ.ಎಂ.ಸಿ.ಚಂದ್ರಯ್ಯ, ವಕೀಲರಿಂದ ಆರೋಪಿತರ ಪರವಾಗಿ :**

**5.** ನಮ್ಮ ಊರಿನ ಯಾರು, ಯಾರು ಶ್ರೀ ವಿಶ್ವಭಾರತಿ ಶಾಲೆಯಲ್ಲಿ ಓದುತ್ತಿದ್ದಾರೆಂದು ಗೊತ್ತಿಲ್ಲ. ಈ ಘಟನೆ ಆಗಿ ಎಷ್ಟು ದಿವಸಗಳಿಗೆ ನನ್ನನ್ನು ಸರ್ ಕರೆದುಕೊಂಡು ಹೋದರು ಎಂದು ನೆನಪಿಲ್ಲ. ನನ್ನನ್ನು ಸುರಪುರಕ್ಕೆ ಕರೆದುಕೊಂಡು ಹೋಗಿ ಬೇರೆ ಶಾಲೆಗೆ ಸೇರಿಸಿಲ್ಲ. ಅಲ್ಲಿಗೆ ಕರೆದುಕೊಂಡು ಹೋದ ನಂತರ ವಾಪಸ್ ಕರೆದುಕೊಂಡು ಬಂದಿಲ್ಲ. ಭರತ್ ಕುಮಾರ್ ಬೇರೆ ಮಕ್ಕಳಿಗೆ ಹೊಡೆದಿದ್ದನ್ನು ನಾನು ಕಣ್ಣಾರೆ ನೋಡಿಲ್ಲ. ಬಿಇಓ ರವರು ಘಟನೆ ನಡೆದ ನಂತರ ಯಾವತ್ತು ಬಂದಿದ್ದರು ಎಂದು ನನಗೆ ನೆನಪಿಲ್ಲ. ಬಿಇಓ ರವರು ಬಂದು ನನ್ನನ್ನು ವಿಚಾರಣೆ ಮಾಡಿಲ್ಲ. ಆ ಶಾಲೆಯ ಕಾರ್ಯದರ್ಶಿಯವರು ಆಗಾಗ

ಶಾಲೆಗೆ ಬರುತ್ತಿದ್ದರು. ನನ್ನ ಆರೋಗ್ಯ ಮತ್ತು ಊಟ, ತಿಂಡಿ ಬಗ್ಗೆ ವಿಚಾರಿಸುತ್ತಿದ್ದರು. ಕಾರ್ಯದರ್ಶಿಯವರು ಏನೋ ಹೇಳುತ್ತಾರೋ ಅದೇ ರೀತಿ ನಡೆದುಕೊಳ್ಳುತ್ತಿದ್ದೆವು. ಭರತ್ ಕುಮಾರ್ ಹಾಸ್ಟೆಲ್ ಗೆ ಬಂದು ಬೇರೆ ಹುಡುಗರಿಗೆ ಹೊಡೆದರು ಎಂದು ಕಾರ್ಯದರ್ಶಿಯವರು ಹೇಳಿಕೊಟ್ಟಂತೆ ನ್ಯಾಯಾಧೀಶರ ಮುಂದೆ ಹೇಳಿದ್ದೇನೆ. ಆರೋಪಿ ಆ ದಿನ ನಮ್ಮ ಹಾಸ್ಟೆಲ್ ಗೆ ಬಂದಿಲ್ಲ, ಯಾವುದೇ ಹುಡುಗರಿಗೆ ಹೊಡೆದಿಲ್ಲ ಎಂದರೆ ಸರಿಯಲ್ಲ. ಯಾವುದೇ ಗಲಾಟೆ ನಡೆಯದಿದ್ದರೂ ಕೂಡಾ ಕಾರ್ಯದರ್ಶಿಯವರು(ತಾತ) ಹೇಳಿಕೊಟ್ಟಂತೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲ

**(ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಲ್ಪಟ್ಟಿತು).**

ಓದಿ ಹೇಳಿ ಕೇ ಸರಿ ಇದೆ ಎಂದು ಒಪ್ಪಿದ್ದಾರೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು